ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ

ಆ) ಬಂದಿದೆ

ಇ) ಹೌದು

ಈ) ಅಂದಾಜು ವೆಚ್ಚ ರೂ. 4.98 ಲಕ್ಷಗಳು

ಉ) 1998ರ ಮಳೆಗಾಲ ಪ್ರಾರಂಭವಾಗುವ ಮೊದಲು ಪೂರ್ಣಗೊಳಿಸಲು ಯೋಜಿಸಲಾಗಿದೆ.

ಮಾಗಡಿ ತಾಲ್ಲೂಕಿನ ರಾಜ್ಯಹೆದ್ದಾರಿಗಳ ದುರಸ್ಥಿ

157 (426) ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮಾಗಡಿ ತಾಲ್ಲೂಕಿನ ರಾಜ್ಯ ಹೆದ್ದಾರಿಗಳು ತೀವ್ರ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಇ) ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು?

ಈ) ಈ ಕಾಮಗಾರಿಯನ್ನು ಯಾವಾಗ ಕೈಗೊಳ್ಳಲಾಗುವುದು?

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಮಾಗಡಿ ತಾಲ್ಲೂಕಿನ ರಾಜ್ಯ ಹೆದ್ದಾರಿಗಳು ವಾಹನ ಸಂಚಾರಕ್ಕೆ ಯೋಗ್ಯವಾಗಿದೆ

ಆ) ಈ ತಾಲ್ಲೂಕಿಗೆ ಲಭ್ಯವಿರುವ ಅನುಧಾನದಲ್ಲಿ 7.0 ಕಿ.ಮೀ ಮರು ಡಾಂಬರೀಕರಣ ಹಾಗೂ ಇತರೆ ಅಭಿವೃದ್ಧಿ ಕಾರ್ಯಕ್ರಮ ಕೈಗೊಳ್ಳಲಾಗಿದೆ.

ಇ) ಸುಮಾರು 4.00 ಕೋಟಿ ರೂ. ಗಳು ಅಂದಾಜು ಆಗುತ್ತದೆ.

ಈ) ಅನುದಾನ ಲಭ್ಯತೆಯ ಮೇರೆಗೆ ಕಾಮಗಾರಿಗಳನ್ನು ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು.

ಮಾಗಡಿ ತಾಲ್ಲೂಕಿನಲ್ಲಿ ಮೀನುಗಾರರಿಗೆ ವಸತಿ ಸೌಲಭ್ಯ ಸಾಮಾಜಿಕ ಅರಣ್ಯ ಯೋಜನೆ

159 (429) ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮಾಗಡಿ ತಾಲ್ಲೂಕಿನಲ್ಲಿರುವ ಮೀನುಗಾರರ ಸಂಖ್ಯೆ ಎಷ್ಟು? ಇವರ ಆರ್ಥಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿಗಳು ಚೆನ್ನಾಗಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಅ) ಇವರಲ್ಲಿ ವಸತಿ, ಹೀನರ, ಭೂಹೀನರ, ನಿವೇಶನರಹಿತ ಸಂಖ್ಯೆ ಎಷ್ಟು;

ಇ) ಇವರಿಗೆ ವಸತಿ ನಿರ್ಮಿಸಿಕೊಡಲು ಸರ್ಕಾರವು ಉದ್ದೇಶಿಸಿದೆಯೇ? ಹಾಗಿದ್ದಲ್ಲಿ ಯಾವಾಗ ಕಾರ್ಯಕ್ರಮ ಹಮ್ಮಿಕೊಳ್ಳುವುದು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಮೀನುಗಾರರ ಸಂಖ್ಯೆ - 3359 ಇವರು ಬೆಸ್ತ, ಗಂಗಾಮತದಸ್ಥ ಹಾಗೂ ತಿಗಳರ ಉಪಜಾತಿಗೆ ಸೇರಿದರವರಾಗಿದ್ದು ಇವರು ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗದವರಾಗಿರುತ್ತಾರೆ.

ಆ) ಇವರಲ್ಲಿ ಸುಮಾರು 1250 ವಸತಿ ಹೀನರಾಗಿರುತ್ತಾರೆ ಮತ್ತು 1050 ಜನರು ನಿವೇಶನ ಇಲ್ಲದವರಾಗಿರುತ್ತಾರೆ. ಭೂಹೀನ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ.

ಇ) ರಾಷ್ಟ್ರೀಯ ಮೀನುಗಾರರ ಕಲ್ಯಾಣ ನಿಧಿ ಯೋಜನೆಯಲ್ಲಿ ಹಾಗೂ ಹುಡ್ಕೋ ಸಂಸ್ಥೆಯ ನೆರವಿನಿಂದ ಮುಂದಿನ ವರ್ಷಗಳಲ್ಲಿ ಸಾಧ್ಯವಾದಷ್ಟು ವಸತಿಗಳನ್ನು ಅರ್ಹವುಳ್ಳ ವಸತಿ ರಹಿತ ಮೀನುಗಾರರಿಗೆ ಹಂತ ಹಂತವಾಗಿ ಒದಗಿಸಿ ಕೊಡಲಾಗುವುದು.

ನಾಗಪುರ ಯೋಜನೆ ಬಗ್ಗೆ

160 (481) ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಲೋಕೋಪಯೋಗಿ ಸಚಿವರು ತಾ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ನಾಗಾಪುರ ಪ್ಲಾನ್ (ಯೋಜನೆ) ಅಂದರೇನು? ಈ ಯೋಜನೆಯನ್ನು ಎಂದಿನಂತೆ ಜಾರಿಯಲ್ಲಿ ತರಲಾಗಿದೆ? ಈ ಯೋಜನೆ ಪ್ರಕಾರ ಪ್ರತಿಯೊಂದು ಹೆದ್ದಾರಿಯ ಪ್ರತಿ ವರ್ಷ ವಾರ್ಷಿಕ ನಿರ್ವಹಣೆಗಾಗಿ ಎಷ್ಟು ಹಣ ವೆಚ್ಚ ಮಾಡಲಾಗುತ್ತಿದೆ? ಪ್ರತಿಯೊಂದು ಹೆದ್ದಾರಿ ಎಷ್ಟು ಅಗಲವಾಗಿರಬೇಕೆಂದು ಸರ್ಕಾರ ಸೃಷ್ಟಿಸಿದೆ? ಈ ಅಗಲ ಅತೀಕ್ರಮಣ ಮಾಡಿದ್ದರೆ ಸರ್ಕಾರ ಕೈಗೊಳ್ಳುವ ಕ್ರಮವೇನು?

ಆ) ಈ ಹೆದ್ದಾರಿಗಳು ನಗರ, ಪಟ್ಟಣ ಮತ್ತು ಗ್ರಾಮಗಳ ಮುಖಾಂತರ ಹಾದಿದ್ದು, ಹೆದ್ದಾರಿ ಅಗಲವನ್ನು ಅತಿಕ್ರಮಿಸಿದರೆ ಸ್ಥಳಾಂತರಿಸಲು ಸರ್ಕಾರ ಸ್ಪಷ್ಟ ಸೂಚನೆಗಳನ್ನು ನೀಡಿದೆಯೇ.

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ದೇಶದ ಮುಖ್ಯ ಇಂಜಿನಿಯರುಗಳು ನಾಗಪುರದಲ್ಲಿ 1943 ರಲ್ಲಿನ ಸಭೆಯಲ್ಲಿ ರಸ್ತೆಗಳ ಅಭಿವೃದ್ಧಿಗಾಗಿ ನಾಗಪುರ ಯೋಜನೆ ಎಂದು ಕರೆಯಲಾಗಿದೆ.

ಇದರ ನಂತರ ಮುಂಬೈ ಯೋಜನೆ ಹಾಗೂ 1981-2001 ರಸ್ತೆ ಅಭಿವೃದ್ಧಿ ಯೋಜನೆ ರಚಿಸಲಾಗಿದೆ. ಈ ಯೋಜನೆಯನ್ನು 1941 ರಿಂದ 1961 ರವರೆಗಿನ 2 ದಶಕಗಳಿಗಾಗಿ ಸಿದ್ಧಪಡಿಸಲಾಗಿತ್ತು. ಈ ಯೋಜನೆಯ ನಂತರ ಇಂತಹವೇ ಇನ್ನೆರಡು ಯೋಜನೆಗಳು ಅಂದರೆ ''ಮುಂಬಯಿ ಯೋಜನೆ'' ಹಾಗೂ ಲಕ್ನೋ ಯೋಜನೆ'' ಗಳು ಇವುಗಳನ್ನು 1961 ರಿಂದ 1981 ಕ್ಕಾಗಿ ಹಾಗೂ 1981 ರಿಂದ 2001 ಕ್ಕಾಗಿ ಹಮ್ಮಿಕೊಳ್ಳಲಾಗಿತ್ತು. ರಸ್ತೆಗಳ ನಿರ್ವಹಣೆಗಾಗಿ ಕೇಂದ್ರ ಸಾರಿಗೆ ಮಂತ್ರಾಲಯ ಹಾಗೂ ಆರ್ಥಿಕ ಆಯೋಗ ವೆಚ್ಚವನ್ನು ನಿರ್ಧರಿಸುತ್ತದೆ.